(SRI S. SIVAPPA)

have the opportunity to discuss the financial estimates first. So, if everything is over and reply is made and then we have to take it up, it will become stale and the priority to be given to this House, will be lost. I think this should not become a bad precedent.

Sri S. M. KRISHNA (Maddur).—It is an accepted principle that as far as possible the lower House must get the earliest opportunity to debate and vote the supplementary demands. Of course there is that qualification "as far as possible". But, whenever work of the Government is arranged, it can be so arranged that the lower House must get priority and first opportunity to discuss the financial estimates and subsequently it should go before the other House. I am suggesting this not that we are under-estimating the efficacy of the debate that will go on elsewhere. Apart from whatever understanding we may have, the last evening—the Minister for Home pointed out that there was an understanding that the Food Minister would answer any questions that might come from the House—I would appeal to you that you may kindly direct the Government to move the supplementary estimates for the voting of this House.

Sri V. M. DEO (Gubbi).—I would like to say just one more point. It will be very bad if we hustle through the Bill. That is one consideration which should weigh with you.

Mr. SPEAKER.—It is a very important matter. I am going to study and give a ruling a little later. In the meanwhile the Deputy Speaker will be in the Chair. Now Sri G. V. Gowda will continue.

[MR. DEPUTY SPEAKER in the Chair]

MYSORE STATE CIVIL SERVICES (PREVENTION OF STRIKES) BILL, 1966.

Motion to consider—(Contd.)

Sri G. V. GOWDA.—Therefore, any law which seeks to impose any unreasonable restriction cannot stand. It is said that any person who incites is punishable. We have to see whether the restrictions imposed in clauses 5, 6 and 7 are reasonable or beyond our competence. In fact in one case it has been held that a law which seeks to put restrictions on the freedom of speech and expression which may not undermine the security of the State or tend to overthrow the State cannot claim the protection of Clause (2) of Art. 19 :

> "Therefore, a law which imposes restrictions on the freedom of speech and expression for preventing a breach of public safety or public order which may not undermine the security of the

> State or tend to overthrow the State cannot claim the protection of clause (2) of Article 19. Section 9 (1-A) was challenged as it embraced both species of activities referred to above and as that sub-section was not severable, the whole section was held to be bad".

Therefore, what I mean to say is unless the restriction sought to be imposed is reasonable, it cannot stand the test of Article 19 (2). Therefore I am submitting that even supposing a person incites or makes a speech saying that the N.G.O's Association have a legitimate grievance and they can agitate and in pursuance of that speech they take some steps, allegedly to strike, does it mean that, that person can be prosecuted and can be punished ? Therefore it is most unreasonable contention. I would quote another instance. The constitutional validity of section 3 of U.P. (Special Powers) Act was challenged by Dr. Ram Manhar Lohia. The case against him was that he instigated the people not to pay arrears of land revenue and that it was a serious offence and he was arrested and he was prosecuted. It was challenged that restriction imposed on the fundamental right to speech making is beyond the competence of a particular legislature. So, it was struck down.

> "The High Court held the section to be *ultra uires* of Art. 19 (1) (*a*) and was not saved by clause (2) of Art. 19 as it could not be said to be in the interest of public order or security of the State. It was pointed out that non-payment of revenues as such cannot affect either public order or security of the State. Incitement to break a law regarding payment of taxes is not *per se* an offence".

Therefore, it is held in very many cases that incitement to break a law regarding taxation is not an offence and therefore any law which imposes such restrictions is violation of Art. 19. Such being the case, I cannot understand whether we can impose such restrictions. That is beyond our competence. The legislature can impose restrictions on the right to free speech on seven grounds :

1. Security of the State
2. Friendly relations with foreign states
3. Public order
4. Decency or morality
5. Contempt of court
6. Defamation
7. Incitement to an offence.

These are the seven grounds on which we can adopt a legislation imposing reasonable restrictions on the exercise of the basic right or fundamental rights as it is called, as guaranted under the Constitution. All these restrictions that are sought to be imposed under clause 5, 6 and 7 are in my opinion, unreasonable and they cannot be saved by Art. 19 (2).

(SRI G. V. GOWDA)

If anybody challenges in a court of law, they will be struck down. Can we say that if a person incites to break a law he can be prosecuted ? I do not think it certainly comes within the exemptions given under Art. 19 (2). Therefore, my submission here would be that clauses 5, 6 and 7 cannot stand the test of law and they are against the basic rights guaranteed under Art. 19 and 19 (2).

The hon'ble members will please see the circumstances under which this ordinance was issued on 15th or 16th October 1966. The Government knew that a session of the legislature would be called and we were told that it would be convened on 2nd December. The civil servants had announced that they would go on mass leave on the 6th November. Even assuming that there was an emergency to promulgate an ordinance, could they not have called the session earlier and adopted an enactment? If the Government felt that there was the emergency the Civil Servants Conduct rules provide for the Government to take appropriate action against those who indulge in demonstrations. Therefore my submission is that with a malafide intention this ordinance has been promulgated. In fact the power vested in the Government under the constitution to issue an ordinance has been misused and that is my challenge. In spite of all this, if they want to get the ordinance promulgated, does it not speak of their intention ? It is only to abuse power and nothing else. The civil servants may be under the influence of outsiders and if they instigate or incite, they will also be prosecuted. That is why this particular legislation has been brought. Without taking departmental proceedings, how can a civil servant be prosecuted ? Supposing a Government servant has done something to strike work. Can a man in the street complain to the police or to the Magistrate court that so and so civil servant has struck work ? Should not permission be obtained from competent authority for prosecuting him ? How can a civil servant be straightaway prosecuted ? Every offence must have two factors : a person must have a dishonest intention to do an act which results in wrongful loss to the State or somebody else. There must be a commission of offence motivated by dishonest intention. Unless it be there, how can an offence be brought within the ambit of penalty ? Assuming that the civil servants take a decision to send enmasse leave applications in order to ventilate their grievances. Is it dishonest intention ? Would it result in wrongful loss to Government ? Government may suffer to the extent of loss of one day's work. Therefore, the fundamental principle of jurisprudence is given a go-bye by adopting this legislation. For taking a strike decision without a dishonest intention, if they are to be prosecuted I do not know what else the Goveanment would not hesitate to do. The penalty is 6 months' rigorous imprisonment or Rs. 500 fine or both. Should not a punishment depend upon the severity of the offence ? Government alone can justify this punishment. The punishment for incitement is twice. Abetment is also an offence ; it carries the same punishment as the original offence. To punish like this is

inconsistent with the very intention of the Criminal Procedure Code. There are three ingredients of an offence *viz.*, preparation, attempt and commission. Take the case of murder. If the court finds that there is material evidence to show that there is actual preparation for commission of an offence, the court cannot punish because preparation is not an offence. Only if there is an attempt it becomes punishable. Here, even preparation has been made punishable. Any police officer, even a Constable, can arrest without a warrant. Is it the way of rounding up some people who, according to the Government, are their political enemies? Is it justifiable and can it stand the test of fairness and equity? The whole thing is done not with the intention of safeguarding the rights of civil servants. Let them take departmental action against them. There are hundreds of cases where the civil servants have indulged in misappropriation. Have they been prosecuted and has the money been recovered? If the civil servants demonstrate or strike work, they are sought to be prosecuted as if they have committed a heinous crime. Should they not ventilate their grievances? Government may do anything to make them behave well. They want to take advantage of this legislation to book many people. Of course, some body will go and challenge this legislation in a court; Government will know about it in a couple of days. Imposing unreasonable restrictions on the fundamental right of speech guaranteed under the Constitution is something that cannot be imagined. I do not think it becomes fair to the House to adopt a legislation of this type.

† ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಸ್ವಾಮಿ, ಅಧ್ಯಕ್ಷರೇ, ಈ ಬಿಲ್ಲನ್ನು ವಿರೋಧಿಸುತ್ತೇನೆ. ಸರ್ಕಾರದವರು ಇದನ್ನು ನಮ್ಮ ಮುಂದೆ ಇಟ್ಟಿದ್ದಕ್ಕಾಗಿ ಬಹಳ ದುಃಖ ಪಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಗೃಹ ಮಂತ್ರಿಗಳು ಸ್ವಾತಂತ್ರ್ಯ ಬಂದ ಮೇಲೆ ಪ್ರಜಾಪ್ರಭುತ್ವ ಯುಗದಲ್ಲಿ ಶಾಂತಿಯುತವಾಗಿ ಪ್ರಜೆಗಳು ತಮ್ಮ ಹಕ್ಕುಬಾಧ್ಯತೆಗಳನ್ನು ಅನುಭವಿಸಲು ಅವಕಾಶಮಾಡಿಕೊಡುವುದಾಗಿ ಹೇಳುತ್ತಿದ್ದವರು ತಮ್ಮ ಕೈಕೆಳಗೆ ಕೆಲಸ ಮಾಡುವ ಎನ್. ಜಿ. ಓ. ಗಳು ಅಥವಾ ಬೇರೆ ನೌಕರರಿಗೆ ಈ ರೀತಿಯಿಂದ ಒಂದು ಕಾಯಿದೆ ತರುವುದು ಮನುಷ್ಯತ್ವ ಇರುವವರು ಮಾಡುವ ಕೆಲಸವೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಈಗ ಮೂರು ವರ್ಷಗಳಿಂದ ನೌಕರರ ಬೇಡಿಕೆ ಇದೆ, ಒಂದು ಪೇ ಕಮಿಷನ್ ನೇಮಕ ಮಾಡಬೇಕೆಂದು ಮೂರು ವರ್ಷಗಳಿಂದ ಕೇಳುತ್ತಾ ತಮ್ಮ ಬೇಡಿಕೆಗಳನ್ನು ಮನ್ನಿಸುವುದಕ್ಕಾಗಿ ಉಪವಾಸ, ಮೆರವಣಿಗೆ ಮುಂತಾದವನ್ನು ಮಾಡಿದ ಮೇಲೆ ಇಂದು ಒಂದು ಕಮಿಷನ್ ಮಾಡಿದರು. ಇದಕ್ಕೆ ಮುಂಚೆ ಸಾರ್ವತ್ರಿಕವಾಗಿ ನೌಕರರು ಒಂದು ದಿನ ಕ್ಯಾಷುಯಲ್ ರಜ ಪಡೆಯುವುದಾಗಿ ಪ್ರಕಟಿಸಿದಾಗ ಮಾನ್ಯ ಮುಖ್ಯ ಮಂತ್ರಿಗಳು ನೌಕರರು ತಮ್ಮನ್ನು ಭೆಟ್ಟಿಯಾಗಬೇಕೆಂದು ತಿಳಿಸಿದರು. ಅದರಂತೆ ಭೆಟ್ಟಿಯಾದಾಗ ನೌಕರರೊಡನೆ ಮಾತನಾಡಿದ ರೀತಿಯನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಎಲ್ಲರೂ ಗ್ರ್ಯಾಜುಯೇಟ್ ಆಗಿರುವ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಳ್ಳಿ, ಈ ಸಮಸ್ಯೆ ಬಗೆಹರಿಯುತ್ತದೆ ಎಂದು ಹೇಳಿದರಂತೆ. ಇದು ನನಗೆ ವಿಚಿತ್ರವಾಗಿ ಕಾಣುತ್ತದೆ. ಮದುವೆಗೆ ಸಂಬಂಧಪಟ್ಟ ಪೋರ್ಟ್‌ಫೋಲಿಯೋ ಒಂದಿದ್ದರೆ ಚೆನ್ನಾಗಿತ್ತು ಎಂದು ಕಾಣುತ್ತದೆ, ಎಷ್ಟೋ ಮಂದಿ ಮದುವೆಯಿಲ್ಲದ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳಿದ್ದಾರೆ; ಅದಕ್ಕೆ ಕಾರಣ ಆರ್ಥಿಕ ತೊಂದರೆ. ಇದಕ್ಕಾಗಿ ಒಂದು ಪೋರ್ಟ್‌ಫೋಲಿಯೋ ಮಾಡಿದರೆ ಈ ಸಮಸ್ಯೆ ಬಗೆ ಹರಿಯಬಹುದೋ ಏನೋ.

ಕಟ್ಟಿಗೆ ಸಿಕ್ಕುವುದಿಲ್ಲ ಅದು ತುಟ್ಟಿಯಾಗಿದೆ ಎಂದರೆ, ಎಲೆಕ್ಟ್ರಿಸಿಟಿ ಮೇಲೆ ಅಡಿಗೆ ಮಾಡಿರಿ ಅನ್ನುತ್ತಾರೆ. ಒಂದು ಹೀಟರ್ ಕೊಳ್ಳಲಿಕ್ಕೆ ಎಷ್ಟು ದುಡ್ಡು ಬೇಕು ಎನ್ನುವುದರ ಅರಿವೇ ಅವರಿಗೆ ಇಲ್ಲ ಎಂದರೆ ನನಗೆ ನಗು ಬರುತ್ತದೆ. ನೂರು, ನೂರೈವತ್ತು ರೂಪಾಯಿ ಕೊಟ್ಟರೆ ಒಂದು ಹೀಟರ್ ಬರುತ್ತದೆ; ಅದೇ ರೀತಿ ಒಂದು ಸ್ಟೋವ್ ತೆಗೆದುಕೊಳ್ಳಬೇಕೆಂದರೆ 60-70 ರೂಪಾಯಿ

(ಶ್ರೀ ಗಂಗಾಧರ ನಾಮೋಷಿ)

ಕೊಡಬೇಕಾಗುತ್ತದೆ. ಅದು ತುಟ್ಟಿಯಾದರೆ ಗ್ಯಾಸ್‌ನಲ್ಲಿ ಮಾಡ್ರಿ ಅನ್ನುತ್ತಾರೆ. ಅದಕ್ಕೂ 250-300 ರೂಪಾಯಿ ಬೇಕು. ತುಟ್ಟಿಯಾಗಿದೆ ನಿಮ್ಮ ಲಿವಿಂಗ್ ಇಂಡೆಕ್ಸ್ ಪ್ರಕಾರ ತುಟ್ಟಿ ಭತ್ಯ ಕೊಡ್ರಿ ಎಂದರೆ ನೀವು ಹಾಗೆ ಮಾಡ್ರಿ ಹೀಗೆ ಮಾಡ್ರಿ ಎಂದು ಬುದ್ಧಿವಾದ ಹೇಳಿ ಕಳುಹಿಸಿದರು. ಮಹಾರಾಷ್ಟ್ರದಲ್ಲಿ ಒಂದು ಸ್ಟ್ರೈಕ್ ಮಾಡಿಯೇ ಬಿಟ್ಟರು. ಬಂಗಾಳದಲ್ಲಿ ಒಂದು ಸ್ಟ್ರೈಕ್ ಮಾಡಿಯೇ ಬಿಟ್ಟರು. ಆ ಸರ್ಕಾರಗಳವರು ಇಂಥಾ ಯಾವುದೂ ಕಾಯಿದೆ ತರಲಿಲ್ಲ. ಆದರೆ ಮೈಸೂರು ಸರ್ಕಾರದವರು ಮಾತ್ರ ಒಮ್ಮೆಲೇ ಇಂಥಾ ಕಾಯಿದೆಯನ್ನು ತಂದು ಎಲ್ಲಾ ರೀತಿಯಿಂದ ಹತ್ತಿಕ್ಕಿ ಇಡುತ್ತೇವೆ, ದಬಾಯಿಸುತ್ತೇವೆ ಎಂದು ಹೇಳಿ ಯಾವ ರೀತಿ ಯಾವ ಆಧಾರದ ಮೇಲೆ ಮಾಡುವುದಕ್ಕೆ ಹೊರಟಿದ್ದಾರೋ ಗೊತ್ತಿಲ್ಲ. ಲಿವಿಂಗ್ ಸ್ಟ್ಯಾಂಡರ್ಡ್ ಪ್ರಕಾರ ತುಟ್ಟಿ ಭತ್ಯ ಕೊಡ್ರಿ ಎಂದು ಅವರು ಕೇಳುತ್ತಾ ಇದ್ದಾರೆ. ಮೊನ್ನೆ ತಮ್ಮ ಅಧ್ಯಕ್ಷತೆಯಲ್ಲಿ ಲೆಜಿಸ್ಲೇಟರ್ಸ್ ಹೋಂನಲ್ಲಿ ಒಂದು ಸಮಾರಂಭ ಮಾಡಿದಿರಿ, ಆಗ ಶ್ರೀಮಾನ್ ಗಾಂಜಿ ವೀರಪ್ಪನವರು ಅಮೇರಿಕಾದಲ್ಲಿ, ಕೆನಡಾದಲ್ಲಿ ಕೂಲಿಗಾರರ ಮನೆಯಲ್ಲಿ ಟ್ರಾನ್ಸಿಸ್ಟರ್ ಸೆಟ್ ಇರುತ್ತದೆ, ಅವರು ಬಹಳ ಒಳ್ಳೆಯ ರೀತಿಯಿಂದ ಜೀವನ ಮಾಡುತ್ತಾರೆ ಎಂದೆಲ್ಲಾ ಹೇಳಿದರು. ಇಲ್ಲಿರತಕ್ಕ ಎನ್.ಜಿ.ಓ.ಗಳು ಟ್ರಾನ್ಸಿಸ್ಟರ್ ಸೆಟ್‌ಬೇಕು, ಒಳ್ಳೆಯ ಸೌಕರ್ಯ ಬೇಕು ಎಂದು ಕೇಳಲಿಲ್ಲ. ಲಿವಿಂಗ್ ಸ್ಟ್ಯಾಂಡರ್ಡ್ ಪ್ರಕಾರ ತುಟ್ಟಿ ಭತ್ಯ ಕೊಡಿ ಎಂದು ಕೇಳುತ್ತಾ ಇದ್ದಾರೆ. ತಾವು ಮಾತ್ರ ತಮಗೆ ಬೇಕಾದ ಹಾಗೆ ಸೌಕರ್ಯಗಳನ್ನು ಮಾಡಿಕೊಂಡಿರಿ. ಬೆಂಗಳೂರು ಏರ್ ಕಂಡೀಷನ್ ಅಂತ ಹೇಳುತ್ತಾರೆ ಅಂಥಾದ್ದರಲ್ಲೂ ಪ್ರತಿಯೊಬ್ಬ ಮಿನಿಸ್ಟರ ಮನೆಯಲ್ಲೂ ರೆಫ್ರಿಜರೇಟರ್‌ನ್ನು ಇಟ್ಟುಕೊಂಡಿದ್ದೀರಿ, ಎನ್.ಜಿ.ಓ.ಗಳು ಅದನ್ನು ಕೇಳಲಿಲ್ಲ.

[MR. SPEAKER in the Chair].

ಅವರ ಬೇಡಿಕೆಗಳು ನ್ಯಾಯವಾಗಿವೆ. ನೀವು ಮಾತ್ರ ಫಾರಿನ್ ಟೂರ್‌ಗೆ ಹೋದಾಗ ನಿಮಗೆ ಎಲ್ಲಾ ಸೌಲಭ್ಯಗಳನ್ನೂ ಕೊಡುತ್ತಾರೆ. ವಿಸ್ಕಿ, ಬ್ರಾಂಡಿ, ವೋಡ್ಕ ಎಲ್ಲಾ ಸಿಕ್ಕುತ್ತದೆ. ಅಷ್ಟಿದ್ದರೂ ಮೊನ್ನೆತಾನೆ ತಮ್ಮ ಅಲೋಯನ್ಸ್‌ನ್ನು 200 ರೂಪಾಯಿಗೆ ಹೆಚ್ಚು ಮಾಡಿಕೊಂಡಿರಿ, ಪರದೇಶಗಳಿಗೆ ಹೋದರೆ ದುಡ್ಡು ಸಾಕಾಗುವುದಿಲ್ಲ ಎಂದು. ಎನ್.ಜಿ.ಓ. ಗಳು ತಮ್ಮ ಬೇಡಿಕೆಯನ್ನು ಇಟ್ಟರೆ ಈ ರೀತಿಯ ಒಂದು ಬಿಲ್ಲನ್ನು ತಂದಿರುವುದು ಯಾವ ನ್ಯಾಯ ಸ್ವಾಮಿ ? ಮಂತ್ರಿಮಂಡಲದವರು ಒಂದು ಸಬ್ ಕಮಿಟಿ ಮಾಡಿ ಬೆಂಗಳೂರು ಸಿಟಿಯಲ್ಲೇ ಸುತ್ತಾಡಿಕೊಂಡು ಬಂದು ನೋಡಿ. ತಾವೇನೂ ಹೊರಗೆ ಹೋಗಬೇಕಾಗಿಲ್ಲ. ಎನ್. ಜಿ. ಓ. ಗಳ ಮನೆಯಲ್ಲಿ ಏನು ಸೌಲಭ್ಯ ಇದೆ ಎಂಬುದು ಗೊತ್ತಾಗುತ್ತದೆ. ಅವರಿಗೆ ಹಾಕಿಕೊಳ್ಳಲಿಕ್ಕೆ ಚಾಪೆ ಕೂಡ ಇರುವುದಿಲ್ಲ. ಮಿನಿಸ್ಟರಿಗೆ ಮಾತ್ರ ಅವರ ಮನೆಯಲ್ಲಿರುವ ನಾಯಿಗೂ ಕೂಡ ಮಲಗಿಕೊಳ್ಳಲು ಒಳ್ಳೆಯ ಸೌಲಭ್ಯ ಇರುತ್ತದೆ. ಮಿನಿಸ್ಟರ ಮನೆಗೆ ಹೋಗಿದ್ದೆ. ಅಲ್ಲಿ ಅವರ ಮನೆಯ ನಾಯಿ ಸೋಫಾ ಮೇಲೆ ಮಲಗಿತ್ತು. ಅದೇ ಈ ಎನ್. ಜಿ. ಓ. ಗಳ ಮನೆಯಲ್ಲಿ ಕೂಡಲಿಕ್ಕೆ ಚಾಪೆ ಕೂಡ ಇರುವುದಿಲ್ಲ. ಎಷ್ಟೋ ಜನರನ್ನು ಟ್ರಾನ್ಸ್‌ಫರ್ ಮಾಡುತ್ತಾ ಇದ್ದೀರಿ ಗುಲ್ಬರ್ಗಾದಿಂದ ಮಂಗಳೂರಿಗೆ, ಅಲ್ಲಿ ಅವರಿಗೆ ಮನೆ ಸಿಕ್ಕುವುದಿಲ್ಲ. ತಂದೆ ತಾಯಿಗಳು ಖಾಯಿಲೆ ಬಿದ್ದಿದ್ದಾರೆ ಎಂದರೂ ಕೂಡ ಅವರನ್ನು ಕೇಳುವವರು ಇಲ್ಲ. ಸೆಕ್ಷನ್ 6ರ ಪ್ರಕಾರ ತಾವೂ ಕೂಡ ತೊಂದರೆಗೆ ಈಡಾಗುತ್ತೀರಿ ಎಂಬ ಭಯ ನನಗೆ ಇದೆ. ನಾಳೆ ಒಬ್ಬ ಜವಾನ ಬಂದು ಹೊಟ್ಟೆಗೆ ಸಾಕಾಗುವುದಿಲ್ಲ 50 ರೂಪಾಯಿ ಕೊಡಿರಿ ಎಂದರೆ ಸ್ಟ್ರೈಕ್‌ಗೆ ಸಹಾಯ ಮಾಡಿದರು ಎಂದು ಹೇಳಿ ಮನೆಯಲ್ಲಿರತಕ್ಕ ಹೆಣ್ಣು ಮಕ್ಕಳನ್ನು ಅರೆಸ್ಟ್ ಮಾಡುತ್ತಾರೋ ಏನೋ ಅನ್ನುವ ಭಯ ಇದೆ. ಮಿನಿಸ್ಟರ ಮನೆಯಲ್ಲೇ ಆಗಲಿ ಸೆಕ್ರೆಟರಿಗಳ ಮನೆಯಲ್ಲೇ ಆಗಲಿ ಆ ರೀತಿ ಯಾರಾದರೂ ಜವಾನನಿಗೆ ಸಾಲಕೊಟ್ಟರೆ ಅವರನ್ನೂ ಕೂಡ ಹಿಡಿದುಕೊಂಡು ಹೋಗಬಹುದು. ಸ್ವಾತಂತ್ರ್ಯ ಬಂದು 19 ವರ್ಷವಾಯಿತು, ಅಗ್ರಿಕಲ್ಚರಲ್ ಲೇಬರರ್ಸ್ ಬಗ್ಗೆ ಏನೂ ಮಾಡುವುದಕ್ಕೆ ಆಗಿಲ್ಲ ಎಂದು ಮಾನ್ಯ ಮಂತ್ರಿಗಳೇ ಹೇಳಿದರು. ಲೇಬರರ್ಸ್ ಕೆಲಸಕ್ಕೆ ಬರಬೇಕಾದರೆ ಅಂಡರ್‌ವೇರ್ ಹಾಕಿಕೊಂಡು ಬರುತ್ತಾರೆ. ನಾಳೆ ಎನ್. ಜಿ. ಓ. ಗಳೂ ಅಂಡರ್‌ವೇರ್ ಹಾಕಿಕೊಂಡು ಬಂದರೆ ಮರ್ಯಾದೆ ಉಳಿಯುತ್ತದೆಯೇ ? ನಿಮ್ಮಲ್ಲಿ ಕೆಲಸ ಮಾಡತಕ್ಕವರು ಅಂಡರ್‌ವೇರ್ ಹಾಕಿಕೊಂಡು ಕೆಲಸಕ್ಕೆ ಬರಬಹುದೇ ! ಒಳ್ಳೆಯ ಬಟ್ಟೆ ಹಾಕಿಕೊಂಡು, ಕಾಲಿಗೆ ಚಪ್ಪಲಿ ಹಾಕಿಕೊಂಡು, ತಲೆಗೆ ಎಣ್ಣೆ ಹಚ್ಚಿಕೊಂಡು ಕ್ರಾಪ್ ಬಾಚಿಕೊಂಡು ಬರಬೇಕು. ಮಾನ್ಯ ಮಂತ್ರಿಗಳು ತಿಳಿದವರು, ರಾಜಕೀಯದಲ್ಲಿ ಬಹಳವಾಗಿ ಶ್ರಮಿಸಿದವರು, ಬ್ರಿಟಿಷರ ಕಾಲದಲ್ಲಿ ಅವರ ವಿರುದ್ಧ ಹೋರಾಟ ಮಾಡಿದವರು ಅಂಥವರು ಇಂತಹ ಒಂದು ಬಿಲ್ಲನ್ನು ತಂದು ಅವರ ಮಾನಕ್ಕೆ ಧಕ್ಕೆ ತಂದುಕೊಳ್ಳಬಾರದು ಎಂದು ಕಳಕಳಿಯಿಂದ ಬೇಡಿಕೊಂಡು ಈ ಬಿಲ್ಲನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

†ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸಭಾಪತಿಯವರೇ, ನಿನ್ನೆ ಮಾನ್ಯ ಗೃಹಸಚಿವರು ತಮ್ಮ ಮೂವತ್ತು ನಿಮಿಷಗಳ ಗಂಭೀರವಾದಂತಹ ಭಾಷಣದಲ್ಲಿ ಈ ರಾಜ್ಯದಲ್ಲಿ ಇಂತಹ ಒಂದು ಕುರೂಪಿ ಮಸೂದೆ ಏನು ಅವಶ್ಯಕತೆ ಇತ್ತು ಎಂಬುದನ್ನು ಈ ಸಭೆಗೆ ತಿಳಿಸಲು ಪ್ರಯತ್ನಪಟ್ಟರು. ಆದರೆ ಈ ಮಸೂದೆ ಕೇವಲ ಎರಡೂವರೆ ಲಕ್ಷ ಸರ್ಕಾರಿ ಅಧಿಕಾರಿಗಳ ಬಗ್ಗೆಯೇ ಆಗಿದ್ದಿದ್ದರೆ ಈ ಸಭೆಯಲ್ಲಿ ಇಷ್ಟೊಂದು ಕಳವಳವುಂಟಾಗುತ್ತಾ ಇರಲಿಲ್ಲ ಎನ್ನುವ ಮಾತನ್ನು ನಾವು ಗಮನಿಸಬೇಕಾಗಿದೆ. ಇಂದು ರಾಜ್ಯದಲ್ಲಿ ಸರ್ಕಾರಿ ಅಧಿಕಾರಿಗಳಲ್ಲಿ ಅತೃಪ್ತಿ, ಅಸಮಾಧಾನಗಳ ಹೊಗೆಯಾಡುತ್ತಾ ಇದ್ದರೆ ಅದಕ್ಕೆ ಮೂಲತಃ ಕಾರಣ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರ. ಕೇಂದ್ರಸರ್ಕಾರದ ನೌಕರರುಗಳ ಮತ್ತು ರಾಜ್ಯ ಸರ್ಕಾರದ ನೌಕರರುಗಳ ಮಧ್ಯೆ ಅಂತರವನ್ನು ಉಂಟುಮಾಡಿ ಅವರಿಬ್ಬರ ಮಧ್ಯೆ ಭೇದೋಪಾಯವನ್ನು ಕಲ್ಪಿಸಿರುವುದರಿಂದ ಇಂದು ರಾಜ್ಯ ಸರ್ಕಾರದ ನೌಕರರಲ್ಲಿ ಅತೃಪ್ತಿ ಯುಂಟಾಗಿದೆ ಎನ್ನುವ ಅಂಶವನ್ನು ಸಹ ನಾವು ಗಮನಿಸಬೇಕಾಗಿದೆ.

3-00 P.M.

ನಾವು ಈ ಮಾನ್ಯ ಸಭೆಯ ಮುಂದೆ ಹಲವಾರು ಬಾರಿ ರಾಜ್ಯಸರ್ಕಾರವನ್ನು ಪ್ರಾರ್ಥನೆ ಮಾಡಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರರುಗಳ ತುಟ್ಟಿಭತ್ಯದ ಅಂತರದ ವಿಚಾರದಲ್ಲಿ ಒಂದು ಸಮನ್ವಯವನ್ನು ಸಾಧಿಸಬೇಕಾದ್ದು ಬಹಳ ಅಗತ್ಯ ಇದೆ. ಆದ್ದರಿಂದ ಕೇಂದ್ರಸರ್ಕಾರದ ನೌಕರರ ಮಟ್ಟ ಜಾಸ್ತಿಯಾಗಿದೆ, ಅದೇ ಜೀವನ ವೆಚ್ಚವನ್ನು ಇವರೂ ಭರಿಸಬೇಕಾಗಿದೆ; ಆದ್ದರಿಂದ ಒಂದೇ ಪಟ್ಟಣದಲ್ಲಿ ಎರಡು ನೌಕರರೂ ಕೆಲಸ ಮಾಡಬೇಕಾಗಿದೆ ಅವರಿಗೆ ಹೆಚ್ಚಿನ ತುಟ್ಟಿಭತ್ಯ ಮತ್ತು ಇತರ ಭತ್ಯಗಳು ಸಿಕ್ಕಿ ರಾಜ್ಯಸರ್ಕಾರದ ನೌಕರರುಗಳಿಗೆ ಅದಕ್ಕಿಂತ ಕಡಿಮೆ ಸಿಕ್ಕುತ್ತಾ ಇರುವುದನ್ನು ನೋಡಿದರೆ ಅಸಮಾಧಾನ, ಅತೃಪ್ತಿ ಪಡುವುದಕ್ಕೆ ಕಾರಣರಾದವರು ನೀವೇ ಎಂದು ಹೇಳಿ ನಾವು ನಿಮ್ಮಗಳ ಬಗ್ಗೆ ಕೈ ತೋರಿಸಬೇಕಾದ ಅವಶ್ಯಕತೆ ಈ ದಿವಸ ಕಾಣುತ್ತಾ ಇದೆ. ಇದು ನಾನು ಮೊದಲೇ ಅರಿಕೆಮಾಡಿಕೊಂಡ ಹಾಗೆ ಎರಡೂವರೆ ಲಕ್ಷ ಜನ ನೌಕರರ ಪ್ರಶ್ನೆ ಮಾತ್ರವೇ ಅಲ್ಲ. ನಾವು ಈಗಾಗಲೇ ಒಪ್ಪಿಕೊಂಡಿರತಕ್ಕಂಥ ಪ್ರಜಾಪ್ರಭುತ್ವದ ಸಿದ್ಧಾಂತದ ಪ್ರಶ್ನೆ, ಹಾಗೂ ರಾಜ್ಯಾಂಗ ನಮಗೆ ಬಿಟ್ಟುಕೊಟ್ಟಿರತಕ್ಕ ಕೆಲವು ಮೂಲಭೂತವಾದ ಹಕ್ಕುಬಾಧ್ಯತೆಗಳ ಪ್ರಶ್ನೆ ಇಲ್ಲಿವೆ. ವರಿಷ್ಠ ನ್ಯಾಯಾಲಯದ 12 ಜನ ನ್ಯಾಯಮೂರ್ತಿಗಳು ರಾಜ್ಯಾಂಗವು ಬಿಟ್ಟುಕೊಟ್ಟಿರತಕ್ಕ ಮೂಲಭೂತ ವಾದ ಯಾವುದೇ ಹಕ್ಕುಬಾಧ್ಯತೆಗಳನ್ನಾಗಲೀ ಪಾರ್ಲಿಯಮೆಂಟು ಅವುಗಳನ್ನು ಮೊಟಕುಮಾಡುವು ದಕ್ಕೆ ಸಾಧ್ಯವಿಲ್ಲ, ಅದನ್ನು ಮಾಡುವುದಕ್ಕೆ ಹೇಗೆ ಸಾಧ್ಯ ಎಂದು ಕೇಳುತ್ತಿದ್ದಾರೆ. ಅದರ ಬಗ್ಗೆ ಅವರಿನ್ನೂ ಒಂದು ಪರಿಷ್ಕೃತವಾದ ತೀರ್ಮಾನವನ್ನು ಕೊಡತಕ್ಕ ಬಗ್ಗೆ ಆ ವಿಚಾರವಿನ್ನೂ ವರಿಷ್ಠ ನ್ಯಾಯಾಲಯದ ಮುಂದಿದೆ. ಹೀಗೆ ಇದು ಒಂದು ಇಂಥ ಸಂದಿಗ್ಧಪರಿಸ್ಥಿತಿಯಲ್ಲಿರುವಾಗ ರಾಜ್ಯ ಸರ್ಕಾರ ಸರ್ಕಾರೀ ಕೆಲಸದಲ್ಲಿರತಕ್ಕ ಎಲ್ಲಾ ನೌಕರರೂ ಒಂದು ದಿನ ರಜಾ ತೆಗೆದುಕೊಳ್ಳಬೇಕೆಂಬ ಮನೋಭಾವವನ್ನಾಗಲೀ ಅಥವಾ ಇನ್ನೂ ಒಂದು ಹೆಜ್ಜೆ ಅವರು ಮುಂದೆ ಹೋಗಿ ಅವರೊಂದು ದೊಡ್ಡ ಮುಷ್ಕರವನ್ನು ಹೂಡಿದರೆ ಸರ್ಕಾರ ಕೆಲಸಮಾಡುವುದು ಸ್ಥಗಿತವಾಗಿ ಸರ್ಕಾರಿ ಕೆಲಸವೇ ನಿಂತುಹೋಗಬಹುದೆಂಬ ಒಂದು ಶಂಕೆ ಉಂಟಾಗಿ ಸರ್ಕಾರದವರು ಇಂಥ ಒಂದು ಕಠೋರವಾದ ಮಸೂದೆಯನ್ನು ಶಾಸನ ಸಭೆಗಳ ಮುಂದೆ ತಂದು ಇದನ್ನು ಇಲ್ಲಿ ಪಾಸ್‌ಮಾಡಿಸತಕ್ಕ ಪ್ರಯತ್ನ ಗಳನ್ನು ಮುಂದುವರಿಸಿದ್ದಾರೆ. ಆದರೆ ಇದರಲ್ಲಿ ಚುನಾವಣೆಯ ವಿಷಯವಾವುದೂ ಸೇರಿರುವುದಿಲ್ಲ. ಮೊನ್ನೆ ಮಾನ್ಯ ಗೃಹಸಚಿವರು ಮಾತನಾಡುತ್ತಾ ಈ ಮಸೂದೆಯನ್ನು ಮಾಡದಿದ್ದರೆ ನಮಗೂ ಬಹಳ ಅನಾನುಕೂಲವಾಗಬಹುದು ಎಂಬುದಾಗಿ ಒಂದು ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ. ಹಾಗೊಂದುವೇಳೆ ನಮಗೆ ಇದರಿಂದ, ಅಂದರೆ, ಈ ಮಸೂದೆಯಿಂದ ಅನುಕೂಲವಾದರೂ ನಾವು ಅದನ್ನು ನಿರಾಕರಿಸಿ ನಮಗೆ ಅನಾನುಕೂಲಗಳೆಷ್ಟಿದ್ದರೂ ಇಂಥ ಮಿತಿಮೀರಿದ ಕೆಲಸಕ್ಕೆ ಕೈ ಹಾಕು ವುದು ಬೇಡ ಅನ್ನತಕ್ಕ ಸ್ಥಿತಿಯಲ್ಲಿ ನಾವಿದ್ದೇವೆ. ನಾವು ಹೀಗೆ ಎಲ್ಲಾ ವಿಚಾರಗಳನ್ನೂ ಚುನಾ ವಣೆಯ ದೃಷ್ಟಿಯಿಂದಲೇ ನೋಡತಕ್ಕದ್ದನ್ನು ಕೊಂಚಮಟ್ಟಿಗಾದರೂ ತಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಯಾರಾದರೂ ಮಾನ್ಯ ಸದಸ್ಯರು ಆ ರೀತಿ ವಾದಮಾಡಿದರೆ ಅದಕ್ಕೆ ಅಷ್ಟೇನೂ ಹೆಚ್ಚಿನ ಬೆಲೆಯಿರುವುದಿಲ್ಲ, ಅದಕ್ಕೆ ಅಂಥ ಬೆಲೆಕಟ್ಟುವುದಕ್ಕೆ ಇರತಕ್ಕ ಕಾರಣಗಳೇನೆಂಬುದು ನನಗೆ ಗೊತ್ತಾಗುತ್ತಿಲ್ಲ. ಆದರೆ ಯಾವತ್ತೂ ಸರ್ಕಾರ ಪ್ರಜೆಗಳಿಗಿರತಕ್ಕ ಮೂಲಭೂತ ಹಕ್ಕುಗಳನ್ನು ಮೊಟಕುಮಾಡುವುದಕ್ಕೆ ಕೈ ಹಾಕಬಾರದು, ಅವರು ಆ ಮನೋಭಾವವನ್ನು ದೂರಮಾಡುವುದು ಒಳ್ಳೆಯದು. ನಾವು ಇಷ್ಟನ್ನಾದರೂ ಮಾಡುವುದಕ್ಕೆ ಸಾಧ್ಯವಾಗದೆ ಹೋದರೆ ನಾವೇನು ಮೊದಲು ಇಲ್ಲಿಗೆ ಬಂದಾಗ ಒಂದು ಪ್ರತಿಜ್ಞೆಯನ್ನು ಕೈಗೊಂಡಿದ್ದೆವೋ ಅಂಥ ವಚನಸ್ವೀಕಾರಕ್ಕೆ ಭಂಗಬಾರದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ನಾನು ಬಹಳ ಕಳಕಳಿಯಿಂದ ಅವರಲ್ಲಿ ಪ್ರಾರ್ಥನೆಮಾಡಿಕೊಳ್ಳು

(ಶ್ರೀ ಎಸ್. ಎಂ. ಕೃಷ್ಣ)

ತ್ತೇನೆ. ಮೈಸೂರು ಸರ್ಕಾರ ಮತ್ತು ಸರ್ಕಾರದ ನೌಕರರು ಇವರಿಬ್ಬರೂ ಒಂದೇ ಗೃಹಕೃತ್ಯದಲ್ಲಿರತಕ್ಕ ಗಂಡಹೆಂಡಿರಿದ್ದಂತೆ. ಮೈಸೂರಿನಲ್ಲಿ ಶ್ರೀ ಸಾಮಾನ್ಯರು ಯಾವತ್ತೂ ಬಡವನಾಗೇ ಇರುತ್ತಾರೆ. ಆದಾಗ್ಯೂ ಅತೃಪ್ತಿ, ಅರೆಹೊಟ್ಟೆ ಮತ್ತು ಅರೆಮನಸ್ಸಿನಿಂದ ಕಛೇರಿಗೆ ಹೋಗತಕ್ಕ ನೌಕರನು ಅಲ್ಲೇನು ಕೆಲಸಮಾಡಿಯಾನು ? ದೇಶದಲ್ಲಿರತಕ್ಕ ಜನಸಾಮಾನ್ಯರ ಕಲ್ಯಾಣ ಕೆಲಸವನ್ನು ನೋಡಿಕೊಳ್ಳತಕ್ಕ ನೌಕರನು ಕೆಲಸಕ್ಕೆ ಹೋಗುವಾಗ ಹೊಟ್ಟೆತುಂಬ ಊಟಮಾಡಿ ಹೋಗಬೇಕಾದ್ದು ಅವಶ್ಯಕ. ಪ್ರಜೆಗಳ ಹಿತರಕ್ಷಣೆ ಕೆಲಸಕಾರ್ಯಗಳು ನಡೆಯತಕ್ಕ ಕಛೇರಿಗಳು ಅವು ತಾಲ್ಲೂಕ್ ಮಟ್ಟದಲ್ಲೇ ಆಗಲೀ ಅಥವಾ ರಾಜ್ಯವರಿಷ್ಠರು ಕೆಲಸಮಾಡತಕ್ಕ ವಿಧಾನಸೌಧವೇ ಆಗಲೀ ಅಲ್ಲಿ ನಡೆಯಬೇಕಾಗಿರತಕ್ಕ ಕೆಲಸಕಾರ್ಯಗಳು ಸುಲಲಿತವಾಗಿ ಹಾಗೂ ವಿಚಕ್ಷಣೆಯಿಂದ ನಡೆಯಬೇಕಾಗಿದ್ದರೆ ಅಲ್ಲಿ ಕೆಲಸಮಾಡತಕ್ಕ ಸಿಬ್ಬಂದಿವರ್ಗಕ್ಕೆ ಅರೆಹೊಟ್ಟೆಯ ತೊಂದರೆ ಇರಬಾರದು. ಅದನ್ನು ಸರಿಪಡಿಸುವುದನ್ನು ಕೈಬಿಟ್ಟು ಅವರನ್ನು ಇಂಥ ಒಂದು ಮಸೂದೆಯ ಶೃಂಖಲೆಯಲ್ಲಿ ಹಾಕಿ ಕೆಲಸಮಾಡಿಸುತ್ತೇವೆಂಬುದು ಅಷ್ಟು ಉತ್ತಮವಾದ ಫಲವನ್ನು ಕೊಡುತ್ತದೆಂದು ನಾನು ಭಾವಿಸಲಾರೆ. ದೇಶದ ಮಟ್ಟದಲ್ಲಾಗಲೀ, ರಾಜ್ಯದ ಆಡಳಿತ ಮಟ್ಟದಲ್ಲಾಗಲೀ ಸರ್ಕಾರೀ ನೌಕರರ ಬಗ್ಗೆ ಯಾರಿಗೂ ಯಾವ ಅನುಮಾನವೂ ಬಾರದಂತಿರಬೇಕು. ಆದರೆ ಮಾನ್ಯ ಸಚಿವರು ಹೇಳಿದಂಥ ಮಾತುಗಳಲ್ಲಿ ನಾನು ಒಂದನ್ನು ಒಪ್ಪುತ್ತೇನೆ. ಅವರು ಸರ್ಕಾರಿ ಕೆಲಸವೆಂಬುದು ಒಂದು ಬೀಡಿಯ ಕೈಗಾರಿಕೆಯಲ್ಲ ಅಂತ ಹೇಳಿದುದನ್ನು ನಾನೂ ಸಹಾ ಒಪ್ಪುತ್ತೇನೆ. ಹಾಗೆ ಅವರು ಸರ್ಕಾರಿ ಕೆಲಸ ಅನ್ನುವುದು ಒಂದು ಮೇಲ್ಮಟ್ಟದ ಕೆಲಸವೆಂದು ಭಾವಿಸಿದ್ದಲ್ಲಿ ಅದನ್ನು ನಡೆಸಿಕೊಂಡು ಹೋಗತಕ್ಕ ಬಗ್ಗೆ ಎಂಥ ಒಂದು ಮೇಲ್ಮಟ್ಟದ ಸಿಬ್ಬಂದಿಯನ್ನು ಇಟ್ಟು ಯಾವ ಮೇಲ್ಮಟ್ಟದಲ್ಲಿ ಕೆಲಸಗಳನ್ನು ನಡೆಸಬೇಕೆಂಬುದನ್ನು ಅವರು ಇನ್ನೂ ಪರಿಶೀಲನೆಮಾಡಬೇಕಾಗಿದೆ. ಆ ಬೀಡಿ ಕೆಲಸಗಾರರಿಗೂ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಒಂದು ಕಾನೂನಿನ ಆಶೀರ್ವಾದವಿದೆ. ಅದೇರೀತಿಯಾಗಿ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸಮಾಡತಕ್ಕ ಅಥವಾ ಒಂದು ವಿಮಾನ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆಲ್ಲಾ ಒಂದೊಂದು ಕಾನೂನಿನ ಆಶೀರ್ವಾದವಿದೆ. ಮೊನ್ನೆತಾನೆ ಆ ವಿಮಾನ ಕಾರ್ಖಾನೆಯಲ್ಲಿ ಮುಷ್ಕರದ ಸುದ್ದಿ ಹರಡಿದ ಕೂಡಲೇ ಮಂತ್ರಿಗಳು ಅಲ್ಲಿಗೆ ಹೋಗಿ ಅದನ್ನು ವಿಚಾರಮಾಡಿ ಅದನ್ನು ತಪ್ಪಿಸುವುದಕ್ಕೆಷ್ಟು ಬೇಕೊ ಅಷ್ಟನ್ನೂ ಮಾಡಿದರು ಹಾಗೇ ಈ ಸಂದರ್ಭದಲ್ಲಿಯೂ ಕಾನೂನಿನ ಆಶೀರ್ವಾದವಿಲ್ಲದ ನೌಕರರ ವಿಷಯದಲ್ಲಿ ಸರ್ಕಾರದವರು ಬಹಳ ಔದಾರ್ಯದಿಂದಲೂ ಮತ್ತು ಮಮತೆಯಿಂದಲೂ ನಡೆದುಕೊಳ್ಳಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಇಂಥ ಕರಾಳ ಶಾಸನಗಳನ್ನು ಮಾಡುವುದರಿಂದ ಉಂಟಾಗಬಹುದಾದ ಪರಿಣಾಮಗಳೇನೆಂದರೆ : ಇದು ಕೇವಲ ಸರ್ಕಾರಿ ನೌಕರರ ಒಬ್ಬರ ಬಾಯಿ ಕೈ ಕಾಲುಗಳನ್ನು ಕಟ್ಟಿಹಾಕುತ್ತಿಲ್ಲ, ಇದು ಸಾರ್ವಜನಿಕರ ಬಾಯಿ ಕೈ ಕಾಲುಗಳನ್ನು ಬಂಧಿಸುವಂಥಾದ್ದಾಗಿದೆ. ಇಂಥ ಒಂದು ವಿಪರೀತಬುದ್ಧಿ ಈ ಮಸೂದೆಯಲ್ಲಿ ಇರುತ್ತದೆಂದು ನಾನು ಕಾಣುತ್ತಿದ್ದೇನೆ. ರಾಜ್ಯ ನೌಕರರರಿಗೆ ಹೀಗೆ ಚಳವಳಿ ಹೂಡುವುದಕ್ಕೆ ಅವರಿಗೆ ಮೂಲಭೂತವಾದ ಹಕ್ಕುಬಾಧ್ಯತೆಗಳಿಲ್ಲ ಎಂಬುದಾಗಿ ಒಂದು ತೀರ್ಮಾನ ಇದೆ ಎಂಬದಾಗಿ ಯಾವುದಾದರೊಂದು ತೀರ್ಮಾನವಾಗಲಿ, ಆಗ ನಾವು ಅದಕ್ಕೆ ತಲೆಬಾಗೋಣ. ಸರ್ಕಾರಿ ನೌಕರರಿಗೆ ಯಾರಾದರೂ ಮುಷ್ಕರ ಹೂಡಿ ಎಂದು ಪ್ರಚೋದನೆ ಮಾಡಬಹುದು ಎಂಬ ಒಂದು ಕಲಂ ಸಹಾ ಇದರಲ್ಲಿದೆ. ಆದರೆ ದೇಶದಲ್ಲಿ ಈ ಆಡಳಿತಪಕ್ಷಕ್ಕೆ ರಾಜ್ಯಾಡಳಿತ ಸಿಕ್ಕಿ ಇಲ್ಲಿಗೆ 19 ವರ್ಷಗಳಾಯಿತು. ಅಲ್ಲಿಂದ ಇಲ್ಲಿಯವರೆಗೂ ಒಂದೇ ಸಮನಾಗಿ ನಡೆಸಿಕೊಂಡು ಬಂದಿರತಕ್ಕ ಅನ್ಯಾಯ ಅನಾಚಾರಗಳನ್ನು ಇನ್ನೂ ಹೀಗೆ 10 ವರ್ಷಕಾಲ ಮುಂದುವರಿಸಿಕೊಂಡು ಹೋದರೆ ಒಂದಲ್ಲಾ ಒಂದು ದಿನ ಬಂದೇಬರುತ್ತೆ, ಆ ದಿವಸ ಯಾರಾದರೊಂದು ರಾಜಕೀಯ ಪಕ್ಷ ಇವರಿಗೆ ಮುಷ್ಕರ ಹೂಡುವುದಕ್ಕೆ, ಆಂಧೋಳನ ನಡೆಸುವುದಕ್ಕೆ ಉತ್ತೇಜನವನ್ನು ಕೊಟ್ಟರೂ ಕೊಡಬಹುದು. ಅದೇನೂ ಅಂಥ ವಿಶೇಷವಲ್ಲ. ಮುಂದೆ ಎಂಥ ಕೆಟ್ಟದಿನಗಳೇ ಬರಲಿ ಅವು ಬಂದಾಗ ನಾವು ಇಂಥ ಮಸೂದೆಗಳಿಂದ ಅವುಗಳನ್ನು ತಡೆಹಿಡಿಯಬಹುದು ಎನ್ನುವಂಥ ಒಂದು ಮನೋಭಾವ ಏನಿದೆ ಅದು ಪ್ರಜಾಪ್ರಭುತ್ವದ ಚೌಕಟ್ಟಿಗೆ ಹೊಂದಿದೆಯೋ—ಇಲ್ಲವೇ ಎಂಬುದುನ್ನು ಅವರಿನ್ನೂ ಸರಿಯಾಗಿ ಅರ್ಥಮಾಡಿಕೊಂಡಿರುವಂತೆ ಕಂಡು ಬರುತ್ತಿಲ್ಲ. ಈ ಹಿಂದೆ 1947ರಲ್ಲಿ ಈ ದಿವಸ ಯಾರು ಮಂತ್ರಿ ಸ್ಥಾನಗಳಲ್ಲಿ ಕುಳಿತಿದ್ದಾರೋ ಆ ಜನರು ಇಲ್ಲಿ ಬ್ರಿಟಿಷರ ಆಡಳಿತವಿದ್ದಾಗ ಅವರು ಇಂಥ ಒಂದು ಕರಾಳ ಮಸೂದೆಯನ್ನು ತಂದಿದ್ದರೆ ಆಗ ನಿಮ್ಮ ವೀರಾವೇಶ ಹೇಗಿರುತ್ತಿತ್ತು ? ಅಂಥ ನಿಮ್ಮ ವೀರಾವೇಶ ಈ ದಿವಸ ಯಾವ ಮೂಲೆಯಲ್ಲ ಹೋಗಿ ಅಡಗಿದೆ ? ಆ ದಿವಸ ಅಂಥ ಹೋರಾಟಮಾಡಿದ ನೀವು ಈ ದಿವಸ ಇಂಥ ಕಾನೂನು ಮಾಡುವುದು ಸರ್ವಥಾ ನ್ಯಾಯವಾದ್ದಲ್ಲ.

ಈ ದಿವಸ ನಿಮ್ಮ ಅಧಿಕಾರದ ಅಮಲು ಇಂತಹ ಮಸೂದೆಗಳನ್ನು ತರುವ ಒಂದು ವಾತಾವರಣವನ್ನು ಕಲ್ಪಿಸಿದೆ. ಆಗ್ರಹಪೂರ್ವಕವಾಗಿ ಬಹಳ ದಿವಸಗಳಿಂದಲೂ ಪ್ರಾರ್ಥನೆ ಮಾಡಿಕೊಳ್ಳುತ್ತಿರುವಂತೆ ಈಗಲೂ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಏನೆಂದರೆ, ಸರ್ಕಾರಿ ನೌಕರರ ಬಗ್ಗೆ ನಿಮಗೆ ಸಂಪೂರ್ಣವಾದ ಮರುಕವಿರುವುದಾದರೆ ಆ ನೌಕರರ ಪ್ರತಿನಿಧಿಗಳನ್ನು ಹಿಂದೆ ಕರೆಸಿ ಮಾತನಾಡಿದ ರೀತಿ, ಈಗಲೂ ಕರೆಸಿ ಸರ್ಕಾರ ಮತ್ತು ಅಧಿಕಾರಿಗಳ ನಡುವೆ ಸುಮಧುರ ವಾತಾವರಣ ಏರ್ಪಾಡಾಗುವುದಕ್ಕೆ, ಇರುವ ಕುಂದುಕೊರತೆಗಳ ಬಗ್ಗೆ ಮಾತನಾಡಬೇಕು. ಆದ್ದರಿಂದ ಮತ್ತೆ ಈ ನೌಕರರ ಪ್ರತಿನಿಧಿಗಳನ್ನು ಕರೆಸಿಕೊಂಡು ಇರಬಹುದಾದ ಭಿನ್ನಾಭಿಪ್ರಾಯಗಳನ್ನು ತೀರ್ಮಾನಿಸಿ ಮತ್ತೆ ಎಲ್ಲಾ ಕಛೇರಿಗಳಲ್ಲೂ ಯಾವ ವಿಧವಾದಂತಹ ತೊಡಕುಗಳು, ಭಿನ್ನಾಭಿಪ್ರಾಯಗಳು ಇಲ್ಲದೆ ಕೆಲಸ ಮಾಡುವುದಕ್ಕೆ ತಕ್ಕ ವಾತಾವರಣವನ್ನು ಕಲ್ಪಿಸಿಕೊಡತಕ್ಕಂಥದ್ದು ಈ ದಿವಸದ ಜವಾಬ್ದಾರಿಯುತವಾದ ಕೆಲಸವೆಂದು ಹೇಳಿ, ಮಾನ್ಯ ಗೃಹ ಸಚಿವರಿಗೆ ಈ ಮಸೂದೆಯನ್ನು ವಾಪಸ್ ತೆಗೆದುಕೊಂಡು ಅಂತಹ ಒಂದು ಮಧುರ ಬಾಂಧವ್ಯವನ್ನು ಕಲ್ಪಿಸಿಕೊಡಬೇಕೆಂದು ಈ ನಾಲ್ಕು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಈ ದಿನ ನಮ್ಮ ಮುಂದೆ ಇರುವ ಈ ಮಸೂದೆ ಅಂದರೆ ಸಿವಿಲ್ ಸರ್ವೆಂಟ್ಸ್ ಬಗ್ಗೆ ತಂದಿರುವ ಮಸೂದೆ, ಇದನ್ನು ಹಿಂದೆ ಆರ್ಡಿನೆನ್ಸ್ ರೂಪದಲ್ಲಿ ತಂದು ಈಗ ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಮಸೂದೆಯನ್ನು ಆತುರವಾಗಿ ತರಲಿಕ್ಕೆ ಕಾರಣವೇನೆಂಬುದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಈ ಎನ್. ಜಿ. ಓ. ಗಳು 2-3 ತಿಂಗಳುಗಳಿಂದ ಚಳವಳಿ ಮಾಡುತ್ತಿಲ್ಲ. ಸುಮಾರು 2-3 ವರ್ಷಗಳಿಂದ ಚಳವಳಿ ನಡೆಸುತ್ತಿದ್ದಾರೆ. ಮಾರ್ಕೆಟ್‌ನಲ್ಲಿ ಅವಶ್ಯಕ ವಸ್ತುಗಳ ಬೆಲೆ ಹೆಚ್ಚಿ ಅವರು ಜೀವನ ನಡೆಸುವುದು ಕಷ್ಟವಾದಾಗ, ಅವರುಗಳು ತಮಗೆ ತುಟ್ಟಿಭತ್ಯ ಹೆಚ್ಚು ಕೊಡಬೇಕು ಎಂದು ಕೇಳಿದ್ದಾರೆ. ತಮ್ಮ ಮಕ್ಕಳಿಗೆ ಹಾಲು ಬೇಕು, ತಮಗೆ ಆಹಾರ ಬೇಕು, ತಾವು ವಾಸ ಮಾಡುವ ಮನೆಗೆ ಬಾಡಿಗೆ ಕೊಡಬೇಕು ಎಂದು ಮಾನವೀಯತ ದೃಷ್ಟಿಯಿಂದ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟು ಸುಮಾರು 2-3 ವರ್ಷಗಳಿಂದ ಸತತವಾದ ಚಳವಳಿ ನಡೆಸುತ್ತಿದ್ದಾರೆ. ಇಷ್ಟು ಕಾಲಾವಕಾಶವನ್ನು ಅವರು ಕೊಟ್ಟಿದ್ದರೂ ಸಹ, ಈ ಶಾಸನಸಭೆ ನಡೆಯದೆ ಇರತಕ್ಕಂಥ ಕಾಲದಲ್ಲಿ ಆರ್ಡಿನೆನ್ಸ್ ಹೊರಡಿಸಿ, ಈಗ ಕಾನೂನು ಮಾಡಲಿಕ್ಕೆ ಅದನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಮಾನ್ಯ ಗೃಹಸಚಿವರು ಮಾತನಾಡುತ್ತಾ ತಿಳಿಸಿದರು, ಈ ಎನ್.ಜಿ.ಓ. ಸಂಘವು ಪ್ರಾತಿನಿಧಿಕವಾದ ಸಂಘವಲ್ಲ, ಅದರಲ್ಲಿ ಯಾರೋ ಕೆಲವು ವ್ಯಕ್ತಿಗಳು ಸೇರಿಕೊಂಡು ಇಲ್ಲದ ಪ್ರಚೋದನೆ ಮಾಡಿ ಗಲಾಟೆ ಮಾಡುತ್ತಿದ್ದಾರೆಂದು.

ಶ್ರೀ ಎಂ. ವಿ. ರಾಮರಾವ್.—ಎನ್.ಜಿ.ಓ. ಸಂಘದ ವಿಷಯವನ್ನೇ ನಾನು ಮಾತನಾಡಲಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಎನ್.ಜಿ.ಓ. ಸಂಘಕ್ಕೆ ಇಡೀ ರಾಜ್ಯದ ಎಲ್ಲಾ ತಾಲ್ಲೋಕುಗಳಲ್ಲಿಯೂ ಅಂಗ ಸಂಸ್ಥೆಗಳಿವೆ. ತಮಗೆ ನಿಜವಾಗಿಯೂ ಕೂಡ ಈ ಎನ್.ಜಿ.ಓ. ಗಳ ಬಗ್ಗೆ ವಿಶ್ವಾಸವಿದ್ದರೆ, ಬಹಳ ಗಂಭೀರವಾದ ರೀತಿಯಲ್ಲಿ ಮಾನ್ಯ ಗೃಹಸಚಿವರು ಸಭೆಯ ಮುಂದೆ ಇಟ್ಟಿರುವ ವಾದವನ್ನು ಹಿಂತೆಗೆದುಕೊಂಡು ತಮ್ಮ ಕೈಕೆಳಗೆ ಕೆಲಸ ಮಾಡತಕ್ಕ ಎನ್.ಜಿ.ಓ. ಗಳ ಬೇಡಿಕೆಗಳನ್ನು ಒಪ್ಪಲಿಕ್ಕೆ ಪ್ರಯತ್ನ ಮಾಡಬೇಕು. ಈ ದಿವಸ ಸರ್ಕಾರದವರು ಈ ಒಂದು ಕಾನೂನನ್ನು ಒಂದು ಬಲದಿಂದ ಭಯೋತ್ಪಾದನೆಯಿಂದ ತಂದು, ತಮ್ಮ ನೌಕರರಿಗೆ ನೀವು ಸುಮ್ಮನಿದ್ದರೆ ಸರಿ, ಇಲ್ಲದಿದ್ದರೆ 500 ರೂಪಾಯಿಗಳ ದಂಡ ಹಾಕುತ್ತೇವೆ, ಜೈಲಿಗೆ ಕಳಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಒಂದು ಕಾಲದಲ್ಲಿ ಜನರ ಪಕ್ಷವಾಗಿದ್ದ ಈ ಕಾಂಗ್ರೆಸ್ ಪಕ್ಷ ಈ ರೀತಿ ಕರಾಳ ಶಾಸನವನ್ನು ತಂದು ಪೋಲೀಸ್ ಅಧಿಕಾರದಲ್ಲಿ ರಾಜ್ಯಭಾರ ಮಾಡಬೇಕೆನ್ನುವ ಕೊನೆಯ ತೀರ್ಮಾನಕ್ಕೆ ಬಂದಿರುವಹಾಗೆ ಕಾಣುತ್ತದೆ. ಇದು ದುರ್ದೈವದ ಸಂಗತಿ ಎಂದರೆ ತಪ್ಪಾಗಲಾರದು. ಎನ್.ಜಿ.ಓ. ಗಳಿಗೆ ನಮ್ಮ ರಾಜ್ಯದಲ್ಲಿ ಕೊಡುತ್ತಿರುವ ಸಂಬಳವನ್ನು ಅಂಕಿ ಅಂಶಗಳಿಂದ ನೋಡುವುದಾದರೆ ಇಡೀ ಹಿಂದೂಸ್ಥಾನದಲ್ಲಿಯೇ ಬಹಳ ಕಡಿಮೆ ಸಂಬಳ ಪಡೆಯುತ್ತಿದ್ದಾರೆಂದು ಹೇಳಬಹುದು. ಇದೇ ರಾಜ್ಯದಲ್ಲಿ ಕೇಂದ್ರ ಸರ್ಕಾರದ ನೌಕರರು ಕೆಲಸ ಮಾಡುತ್ತಿದ್ದಾರೆ, ಅವರ ಸಂಬಳಕ್ಕೂ ರಾಜ್ಯಸರ್ಕಾರದ ನೌಕರರ ಸಂಬಳಕ್ಕೂ ಬಹಳ ವ್ಯತ್ಯಾಸವಿದೆ. ಈ ದಿವಸ ತಾವು ಕೊಡುತ್ತಿರುವ ಸಂಬಳದಿಂದ ತುಟ್ಟಿಭತ್ಯದಿಂದ ಜೀವನ ನಡೆಸುವುದಕ್ಕೆ ಅವರಿಗೆ ಖಂಡಿತವಾಗಿಯೂ ಸಾಧ್ಯವಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಈ ದಿವಸ ನಮ್ಮ ರಾಜ್ಯದಲ್ಲಿ ಆಹಾರ ಪರಿಸ್ಥಿತಿ, ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ. ದೇಶದಲ್ಲಿ ಮಿತವ್ಯಯ ದೃಷ್ಟಿಯಿಂದ ಹೆಚ್ಚಿನ ಸಂಬಳ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದರಲ್ಲಿ ಸ್ವಲ್ಪ ನಿಜಾಂಶ ಇದ್ದರೂ ಕೂಡ ಅದನ್ನು ಈ ಎನ್.ಜಿ.ಓ. ಗಳಿಗೆ ಅನ್ವಯಿಸಬಾರದು. ಅದು ಕೆಲವು ವರ್ಗಗಳಿಗೆ ಅನ್ವಯಿಸಬೇಕು. ಈ ದಿವಸ ಅಧಿಕಾರದಲ್ಲಿರತಕ್ಕಂಥ ಮಂತ್ರಿಗಳಿಗೆ ಮತ್ತು ಐ.ಎ.ಎಸ್. ಅಧಿಕಾರಿಗಳಿಗೆ ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಸಂಬಳ ಕೊಡಬಾರದು. ಚೀಫ್-ಸೆಕ್ರೆಟರಿಯವರಿಗೆ

(ಶ್ರೀ ಪಿ. ವೆಂಕಟಗಿರಿಯಪ್ಪ)

ಎರಡೂವರೆ ಸಾವಿರದಿಂದ ಮೂರು ಸಾವಿರದವರೆಗೆ ಸಂಬಳ ಕೊಡುತ್ತಿದ್ದೀರಿ. ದೇಶದಲ್ಲಿ ಕಷ್ಟ ಪರಿಸ್ಥಿತಿ ಇಲ್ಲ ಎನ್ನುವುದನ್ನು ಇದು ತೋರಿಸುತ್ತದೆ. ದೇಶದಲ್ಲಿ ಕಷ್ಟ ಪರಿಸ್ಥಿತಿಯಿರುವಾಗ ಕೆಲವರಿಗೆ ಹೆಚ್ಚು ಅನುಕೂಲಗಳು ಬೇಕು, ಹೆಚ್ಚು ಸಂಬಳ ಬೇಕು, ಕೆಲವರಿಗೆ ಬೇಡ ಎನ್ನುವುದು ಸರಿಯಾದುದಲ್ಲ. ನಾನಾದರೂ ಹೇಳುತ್ತೇನೆ, ಒಬ್ಬೊಬ್ಬ ಮಂತ್ರಿಗಳ ಮನೆಯಲ್ಲಿ ಉಚಿತವಾಗಿ ಉಪಯೋಗಿಸುವ ಕರೆಂಟ್ ಲೆಕ್ಕ ಹಾಕಿದರೆ ಅದನ್ನು 10 ಜನ ಎನ್.ಜಿ.ಓ. ಗಳು ಉಪಯೋಗಿಸಬಹುದು. ಮಂತ್ರಿಗಳ ಮನೆಯಲ್ಲಿ ಎಲ್ಲವೂ ಸರ್ಕಾರದ ಖರ್ಚಿನಲ್ಲಿ ನಡೆಯುತ್ತಿದೆ. ದೊಡ್ಡ ಅಧಿಕಾರಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋದರೆ ಅವರಿಗೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದೀರಿ; ಅವರಿಗೂ ಸಹ ತುಟ್ಟಿಭತ್ಯ ಕೊಡುತ್ತಿದ್ದೀರಿ. ಎನ್.ಜಿ.ಓ. ಗಳು ಜೀವನ ಅವಶ್ಯಕ ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕೆ, ಮಕ್ಕಳಿಗೆ ಹಾಲು ಕೊಂಡುಕೊಳ್ಳುವುದಕ್ಕೆ ಹೆಚ್ಚಿನ ತುಟ್ಟಿಭತ್ಯ ಕೇಳಿದರೆ, ಅದು ದೊಡ್ಡ ಅಪರಾಧ ಮಾಡಿದಹಾಗೆ ಎಂದು ಗೃಹಸಚಿವರು ಹೇಳುವುದು ಸೋಜಿಗವಾಗಿ ಕಾಣುತ್ತದೆ. ಈವತ್ತಿನ ದಿವಸ ಎನ್.ಜಿ.ಓ. ಗಳು ಶಾಂತರೀತಿಯಿಂದ ನ್ಯಾಯಬದ್ಧವಾಗಿ ಚಳವಳಿ ನಡೆಸುವುದಕ್ಕೆ ಸರ್ಕಾರದವರು ಅವರಿಗೆ ಯಾವ ಒಂದು ಹಕ್ಕನ್ನೂ ಕೊಟ್ಟಿಲ್ಲ. ಈ ಸರ್ಕಾರಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ, ಜನಸಾಮಾನ್ಯರಲ್ಲಿ ವಿಶ್ವಾಸವಿದ್ದರೆ, ಅಧಿಕಾರದಲ್ಲಿ ಇರಬೇಕು ಎನ್ನುವುದಾದರೆ, ಈ ಸಭೆಯ ಮುಂದಿರುವ ಕರಾಳ ಶಾಸನವನ್ನು ಗೃಹಮಂತ್ರಿಗಳು ವಾಪಸ್ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುತ್ತೇನೆ.

ಈ ದಿವಸ ಈ ಸರ್ಕಾರ ಮುಖ್ಯವಾಗಿ ಏನು ತಿಳಿದುಕೊಳ್ಳಬೇಕೆಂದರೆ, ಹಿಂದೆ ಎನ್.ಜಿ.ಓ.ಗಳು ಬ್ರಿಟಿಷರ ಕಾಲದಲ್ಲಿ ಹಿರಿಯ ಅಧಿಕಾರಿಗಳು ಎಂದು ಹೇಳಿದರೆ ಹೆದರುತ್ತಿದ್ದರು ; ಭಯಭಕ್ತಿಯಿಂದ ಅವರು ಹೇಳಿದ್ದನ್ನೆಲ್ಲಾ ಕೇಳುತ್ತಿದ್ದರು. ಕಾನೂನುಗಳಿಗೆ ಹೆದರುತ್ತಿದ್ದರು. ಐ.ಎ.ಎಸ್. ಅಧಿಕಾರಿಗಳು ಅಥವಾ ಮಂತ್ರಿಗಳು ಅಂದರೆ ಅವರ ಹೋರಾಟಗಳನ್ನೇ ಕೈಬಿಡುತ್ತಿದ್ದರು. ಅವರು ಹೆಚ್ಚಿನ ಪ್ರಯೋಜನವನ್ನೂ ಕೂಡ ಪಡೆಯುತ್ತಿದ್ದರು. ಆ ರೀತಿಯಾಗಿ ಈಗ ಅವರಿಗೆ ಏನಾದರೂ ಪ್ರಯೋಜನವಾಗುತ್ತಿದೆಯೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು. ಈಗ ಎನ್.ಜಿ.ಓ. ಗಳು ಬಹಳ ವ್ಯವಸ್ಥಿತ ರೀತಿಯಲ್ಲಿ ಸಂಘಟಿತರಾಗಿದ್ದಾರೆ. ಅವರ ಹೋರಾಟವೂ ಸಹ ಮುಂದುವರಿಯುತ್ತದೆ. ಇಂತಹ ಕಾನೂನುಗಳನ್ನು ಸರ್ಕಾರದವರು ಮಾಡುವುದಕ್ಕೆ ಬದಲಾಗಿ ಅವರನ್ನು ಪ್ರತ್ಯೇಕವಾಗಿಯೋ ಅಥವಾ ಸಾಮೂಹಿಕವಾಗಿಯೋ ಕರೆಸಿ ಅವರ ವಾದ ಏನಿದೆ ಎಂಬುದನ್ನು ಕೇಳಿ, ಅವರಿಗೆ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ವಿವರಿಸಿ ಸರ್ಕಾರಕ್ಕೆ ಎಷ್ಟು ಸಾಧ್ಯವಾದ ರೀತಿಯಲ್ಲಿ ಸಹಾಯ ಮಾಡುವುದಕ್ಕೆ ಸಾಧ್ಯವೋ ಅಷ್ಟು ಸಹಾಯವನ್ನು ಅವರಿಗೆ ಕೊಡಲು ತಕ್ಕ ಆಲೋಚನೆಯನ್ನು ಕೂಡಲೇ ಮಾಡಬೇಕೆಂದು ನಾನು ಕೇಳಿಕೊಂಡು ಈ ಮಸೂದೆಯನ್ನು ವಿರೋಧಿಸುತ್ತೇನೆ.

† ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ಈ ಸಭೆಯಮುಂದೆ ಇವತ್ತು ಸರ್ಕಾರಿ ನೌಕರರುಗಳ ನ್ಯಾಯವಾದ ಬೇಡಿಕೆಗಳನ್ನು ಮೊಟಕುಮಾಡತಕ್ಕ ಶಾಸನವನ್ನು ಸರ್ಕಾರದವರು ಇಟ್ಟಿದ್ದಾರೆ. ಇದು ರಾಜ್ಯಾಂಗಕ್ಕೆ ವಿರೋಧವಾದಂಥ ಮತ್ತು ದಮನಕಾರಿಯಾದಂಥ ಕರಾಳ ಶಾಸನವೆಂದು ಹೇಳಿ ಇದನ್ನು ನಾನು ವಿರೋಧಿಸುತ್ತೇನೆ. ಈಗಾಗಲೇ ಅನೇಕ ಸ್ನೇಹಿತರು ಹೇಳಿದ್ದಾರೆ. ರಾಜ್ಯಪಾಲರು ಈ ಸಭೆ ನಡೆಯದ ಸಮಯದಲ್ಲಿ ಈ ಒಂದು ತುರ್ತು ಪರಿಸ್ಥಿತಿಯಲ್ಲಿ ಈ ದೇಶದಲ್ಲಿನ ಸರ್ಕಾರೀ ನೌಕರರು ನ್ಯಾಯವಾದ ಬೇಡಿಕೆಗಳಿಗೋಸ್ಕರ ಮುಷ್ಕರವನ್ನು ಮಾಡತಕ್ಕಂಥ ಕಾಲದಲ್ಲಿ, ಈ ನ್ಯಾಯುವಾದಂಥ ಬೇಡಿಕೆಗಳನ್ನು ದಮನಮಾಡಲು ಸರ್ಕಾರ ರಾಜ್ಯಪಾಲರಿಗೆ ಆದೇಶವನ್ನು ಇತ್ತು ಒಂದು ಆರ್ಡಿನೆನ್ಸ್ ಅಥವಾ ಸುಗ್ರೀವಾಜ್ಞೆಯನು ಹೊರಡಿಸಿದರು. ಆ ರೀತಿ ಹೊರಡಿಸಿರುವುದನ್ನು ಇಡೀ ದೇಶದ ಜನ ಅದರಲ್ಲೂ ಮುಖ್ಯವಾಗಿ ನೌಕರವರ್ಗ ತೀವ್ರವಾಗಿ ವಿರೋಧಿಸಿದರು. ಇವತ್ತು ಆ ಒಂದು ಆಜ್ಞೆಯನ್ನು ಕಾನೂನು ಮಾಡಿ ಆ ಕಾನೂನಿನ ಮೂಲಕ ಅವರ ಹಕ್ಕು ಭಾದ್ಯತೆಗಳನ್ನು ಮೊಟಕುಮಾಡುವುದಕ್ಕಾಗಿ ಈ ಸಭೆಯಲ್ಲಿ ಮಾನ್ಯ ಗೃಹ ಮಂತ್ರಿಗಳು ಮಂಡಿಸಿದ್ದಾರೆ. ಈಗ ಸುಮಾರು ನಾಲ್ಕೈದು ವರ್ಷಗಳಿಂದ ದೇಶದ ನೌಕರವರ್ಗದಲ್ಲಿ ಅಸಮಾಧಾನ, ಅಸಂತುಷ್ಟಿಗಳು ಹೇರಳವಾಗಿ ಬೆಳೆದು ಅವರ ಜೀವನ ಸಮಸ್ಯೆ ಹಾಗೂ ಅವರ ಇರುವಿಕೆಯ ಬಗ್ಗೆ ಬಹಳ ಕಷ್ಟತರವಾದ ಪರಿಸ್ಥಿತಿ ಈ ರಾಜ್ಯ ಸರ್ಕಾರದಲ್ಲಿದೆ. ರಾಜ್ಯ ಸರ್ಕಾರದ ಇಂತಹ ನೀತಿ ನಿಯಮಗಳ ಪರಿಣಾಮವಾಗಿ ಎಲ್ಲಾ ವರ್ಗಗಳಲ್ಲೂ ವಿರೋಧ ಬೆಳೆಯಿತು. ಎಲ್ಲಾ ಜನತೆಯೂ ಕೂಡ ರಾಜ್ಯಾಂಗದತ್ತವಾದ ಮತ್ತು ಬಹಳ ಉತ್ತಮವಾದಂಥ ಜೀವನವನ್ನು ಈ ಪ್ರಜಾಪ್ರಭುತ್ವದಲ್ಲಿ ನಡೆಸಬೇಕು, ಅವರಿಗೆ ಉತ್ತಮವಾದಂಥ ಸೌಲಭ್ಯಗಳನ್ನು ಕಲ್ಪಿಸಬೇಕ

ಎನ್ನುವ ಜವಾಬ್ದಾರಿ ಕೆಲಸ ಸರ್ಕಾರಕ್ಕಿದೆ. ಆದರೆ ಪ್ರಜಾಪ್ರಭುತ್ವದಲ್ಲಿ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಎಂದು ಏನು ರಾಜ್ಯಾಂಗದಲ್ಲಿದೆ ಮತ್ತು ಎಲ್ಲಾ ನೌಕರವರ್ಗದವರಿಗಾಗಲೀ, ಕಾರ್ಮಿಕವರ್ಗದವರಾಗಲೀ, ಎಲ್ಲಾ ಪ್ರಜೆಗಳಿಗಾಗಲೀ ಅವರು ಒಳ್ಳೆಯ ಜೀವನವನ್ನು ನಡೆಸಿಕೊಂಡು ಹೋಗುವಂಥ ವಾತಾವರಣವೇನಿದೆ ಅದನ್ನು ಸುಖೀರಾಜ್ಯವೆಂದು ಕರೆಯಬೇಕೆಂದು ಹೇಳುತ್ತಿದ್ದಾರೆ. ಅಂತಹ ಒಂದು ಸುಖೀರಾಜ್ಯವನ್ನು ಸ್ಥಾಪನೆ ಮಾಡಬೇಕಾದರೆ ರಾಜ್ಯಾಂಗದತ್ತವಾದ ಹಕ್ಕುಗಳನ್ನು ಯಾವ ಪ್ರಜಾಪ್ರಭುತ್ವ ಸರ್ಕಾರವೂ ಮೊಟಕು ಮಾಡಲು ರಾಜ್ಯಾಂಗದಲ್ಲಿ ಅವಕಾಶವಿಲ್ಲ. ರಾಜ್ಯಾಂಗದ ಬಗ್ಗೆ ಮಾತನಾಡತಕ್ಕ ಗೃಹಮಂತ್ರಿಗಳು ಅದನ್ನು ವಿರೋಧ ಮಾಡಿದ್ದರೂ ಈ ಮಸೂದೆಯನ್ನು ತಂದಿರುವ ಉದ್ದೇಶ ನೌಕರರ ಹಕ್ಕುಭಾದ್ಯತೆಗಳನ್ನೊಂದೇ ಮೊಟಕು ಮಾಡುವ ಉದ್ದೇಶವಲ್ಲ. ನಾಗರಿಕರ ಹಕ್ಕುಭಾದ್ಯತೆಗಳನ್ನೂ ಕೂಡ ದಮನ ಮಾಡತಕ್ಕ ಪ್ರಜಾಪ್ರಭುತ್ವ ತತ್ವಕ್ಕೇ ವಿರೋಧವಾಗಿರತಕ್ಕ ಕಾನೂನುಗಳನ್ನು ಇಲ್ಲಿ ಅಳವಡಿಸಿಕೊಂಡು ಮಾಡಿದ್ದಾರೆ. ಈ ಮಸೂದೆಯ 5, 6, 7, ಮತ್ತು 8 ನೇ ಕಲಂಗಳನ್ನು ತಾವು ನೋಡಿದರೆ ಈ ರಾಜ್ಯದಲ್ಲಿ ಈ ಕಾನೂನನ್ನು ಅವಗಾಹನೆಗೆ ತೆಗೆದುಕೊಂಡು ಯಾವ ನಾಗರೀಕನನ್ನಾದರೂ ಕೂಡ ಬಂಧಿಸಲು ಅವಕಾಶ ಮಾಡಿಕೊಂಡಿದ್ದಾರೆ. ನೌಕರರ ಹೆಸರಿನಲ್ಲಿ ಇದನ್ನು ತಂದು ರಾಜಕೀಯ ಪಕ್ಷಗಳನ್ನೂ ಕೂಡ ತೊಂದರೆಗೀಡುಮಾಡುವುದಕ್ಕೆ ಮತ್ತು ರಾಜ್ಯಾಂಗದತ್ತವಾದ ಹಾಗೂ ನ್ಯಾಯವಾದ ಬೇಡಿಕೆಗಳನ್ನು ಪ್ರಜಾಪ್ರಭುತ್ವರೀತಿಯಲ್ಲಿ ಹಾಗೂ ಶಾಂತಿಯುತವಾಗಿ ಮಂಡಿಸತಕ್ಕ ಕಾರ್ಯಗಳನ್ನೂ ಕೂಡ ದಮನಮಾಡಲು ಉಗ್ರವಾದ ಶಾಸನವನ್ನು ಮತ್ತು ಆ ಮೂಲಕ ನಮ್ಮ ಬೇಡಿಕೆಗಳನ್ನೂ ಸಹ ಬಂಧಿಸತಕ್ಕ ಕಾನೂನುಗಳನ್ನು ಮಾಡಿದ್ದಾರೆ. ಹಿಂದೆ ಕಾಂಗ್ರೆಸ್ ಸರ್ಕಾರ ಕಾನೂನುಗಳನ್ನು ತಂದರೂ ಪ್ರಜಾಪ್ರಭುತ್ವವನ್ನು ಮಾತ್ರ ಬಹಳ ಉನ್ನತಮಟ್ಟದಲ್ಲಿ ಬೆಳೆಸುತ್ತೇವೆಂದು ಹೇಳುತ್ತಿದ್ದರು. ಅದನ್ನು ಈಗ ಇವರು ಎಷ್ಟರಮಟ್ಟಿಗೆ ಇಲ್ಲಿ ಕಾರ್ಯರೂಪಕ್ಕೆ ತಂದಿದ್ದಾರೆಂದರೆ, ಅತಿ ಉಗ್ರವಾದ ಶಾಸನವನ್ನು ತಂದು ಪ್ರಜಾಪ್ರಭುತ್ವವನ್ನು ತಲೆಕೆಳಗು ಮಾಡಬೇಕು, ಪ್ರಜಾಪ್ರಭುತ್ವ ನಮಗೆ ಬೇಡ, ನಾವು ಪೋಲೀಸು ಕಾನೂನುಗಳು, ಮಿಲಿಟರಿ ಕಾನೂನುಗಳು—ಇವುಗಳಿಂದ ರಾಜ್ಯವನ್ನು ಆಳಬೇಕು, ಅಧಿಕಾರ ನಡೆಸಬೇಕು, ಇನ್ನೂ ಅಧಿಕಾರದಲ್ಲೇ ಇರಬೇಕು ಎನ್ನುವ ಯೋಚನೆ ಮಾಡಿದ್ದಾರೆ. ನಿಜವಾಗಿಯೂ ನೌಕರರ ಸ್ಥಿತಿಯನ್ನು ನೋಡಿದರೆ ಈ ರಾಜ್ಯದಲ್ಲಿ ಎಲ್ಲ ಆಫೀಸುಗಳಲ್ಲಿಯೂ ಇರತಕ್ಕ ನೌಕರರನ್ನು ವಿಚಾರಮಾಡುವುದಾದರೆ ಪ್ರತಿಯೊಬ್ಬ ನೌಕರನಲ್ಲೂ ಒಂದು ರೀತಿಯ ಕಳವಳ ಉಂಟಾಗಿದೆ. ಅವರ ಪ್ರೊಮೋಷನ್ಸ್, ತುಟ್ಟಿಭತ್ಯ, ಜೀವನಕ್ಕೆ ಅವಶ್ಯಕವಾದ ಆಹಾರ ಪರಿಸ್ಥಿತಿ ಬಗ್ಗೆ, ಅವರ ವಸತಿಗಳ ಬಗ್ಗೆ, ಯಾವ ಸೌಕರ್ಯಗಳನ್ನು ಮತ್ತು ಸೌಲತ್ತುಗಳನ್ನು ಈ ಸರ್ಕಾರ ಮಾಡಿದೆ, ಹೇಳಲಿ. ಸರ್ಕಾರಿ ನೌಕರರು ಕೇಳುವುದು ತಮ್ಮ ಇರುವಿಕೆಯ ಹಕ್ಕಿಗೋಸ್ಕರವಾಗಿ ಒಳ್ಳೆಯ ಜೀವನ ಮಾಡಬೇಕು, ಒಳ್ಳೆಯ ಸೌಕರ್ಯವನ್ನು ಪಡೆಯಬೇಕು, ಸುಖವಾಗಿ ಜೀವನ ಮಾಡಬೇಕು ಎನ್ನುವುದು. ಆ ಒಂದು ಹಕ್ಕಿಗೋಸ್ಕರವಾಗಿ ಅವರು ಹೋರಾಟ ಮಾಡುತ್ತಿದ್ದಾರೆ. ಈ ರಾಜ್ಯ ಸರ್ಕಾರಕ್ಕೆ ಅವರ ಬೇಡಿಕೆಯನ್ನು ಈಡೇರಿಸುವುದಕ್ಕೆ ಇರತಕ್ಕಂಥ ಅಡ್ಡಿ ಆತಂಕಗಳೇನು ಅಂದರೆ, ಅವರು ಒಂದೇ ಮಾತಿನಲ್ಲಿ ಹೇಳುತ್ತಾರೆ, ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲವೆಂದು. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಕೋಟ್ಯಾಂತರ ರೂಪಾಯಿಗಳಷ್ಟು ಹಣ ಈ ದೇಶದಲ್ಲಿ ಬಡ ರೈತರು ಕೊಟ್ಟಿರತಕ್ಕಂಥಾದ್ದು. ಕಾರ್ಮಿಕರು ಈ ದೇಶದಲ್ಲಿ ಸೇವೆ ಸಲ್ಲಿಸಿ ದುಡಿದಂತಹ ಹಣ. ಅಂಥಾದ್ದು ಇವರ ರಾಜ್ಯಾಡಳಿತದಲ್ಲಿ ಲೋಪವಾಗಿದೆ, ದುರುಪಯೋಗವಾಗಿದೆ. ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ದುರುಪಯೋಗ ಮಾಡಿದಂತಹ ಚರ್ಯೆಯನ್ನು ಈ ಶಾಸನಸಭೆಯಲ್ಲಿಯೇ ಅಲ್ಲ, ಎಲ್ಲಾ ಕಡೆಗಳಲ್ಲಿಯೂ ಬಹಿರಂಗವಾಗಿ ಟೀಕೆ ಮಾಡಿದ್ದೇವೆ. ಕೋಟ್ಯಾಂತರ ರೂಪಾಯಿಗಳನ್ನು ದುರುಪಯೋಗ ಮಾಡುವಂಥ ಸರ್ಕಾರ ಯಾವ ನೈತಿಕ ಹೊಣೆಯನ್ನು ಹೊತ್ತಿದೆ ? ನೌಕರರು ದೇಶಕ್ಕೋಸ್ಕರ, ಈ ರಾಜ್ಯಕ್ಕೋಸ್ಕರ ರಾಜ್ಯದ ಆಡಳಿತಕ್ಕೋಸ್ಕರ ತಮ್ಮ ಸೇವೆಯನ್ನು ನಿರಂತರವಾಗಿ ಸಲ್ಲಿಸುತ್ತಾ ಇರುವ ಸಮಯದಲ್ಲಿ ಅವರ ಹಕ್ಕುಭಾದ್ಯತೆಯನ್ನು ಮೊಟಕುಮಾಡಿದ್ದಾರೆ. ಸರ್ಕಾರದವರೇನೋ ಕೇವಲ ಆರ್ಥಿಕ ಮುಗ್ಗಟ್ಟನ್ನು ಒಂದನ್ನೇ ಹಿಡಿದು ಹೇಳುತ್ತಿದ್ದಾರೆ. ದೇಶದಲ್ಲಿ ಅಪವ್ಯಯ ಆಗತಕ್ಕ ಹಣವನ್ನೆಲ್ಲಾ ಖಜಾನೆಗೆ ಸೇರಿಸಿ. ದೊಡ್ಡ ದೊಡ್ಡ ಕಂಟ್ರಾಕ್ಟುಗಳನ್ನು ಅಧಿಕ ದರದಲ್ಲಿ ಕೊಟ್ಟು ಈ ದೇಶದಲ್ಲಿ ಅನ್ಯಾಯವಾಗುತ್ತಿರುವುದನ್ನು ಕೂಡಲೇ ನಿಲ್ಲಿಸಿ. ಬಡ ನೌಕರರ ಹಿತವನ್ನು ಉತ್ತಮಪಡಿಸುವುದಕ್ಕೆ ಮಿತವ್ಯಯವನ್ನು ಸಾಧಿಸುತ್ತೇವೆಂದು ನೀವು ಹೇಳಿದಿರಿ. ಅವರನ್ನು ಏನಾದರೂ ತೃಪ್ತಿಪಡಿಸಿದ್ದೀರಾ! ಪ್ರಜಾಪ್ರಭುತ್ವದಲ್ಲಿ ನ್ಯಾಯವಾದ ಬೇಡಿಕೆಗೆ ಇವರು ಗುಂಡು ಇಡುತ್ತೇವೆಂದು ಹೇಳುತ್ತಾರೆ. ನ್ಯಾಯವಾಗಿ ಮಿತವ್ಯಯವನ್ನು ದೇಶದಲ್ಲಿ ಮಾಡಿದ್ದೀರಾ ? ನೀವು ಅಧಿಕಾರದಲ್ಲಿರತಕ್ಕವರು, ಯಾವ ಮಿತವ್ಯಯವನ್ನು ಈ ದೇಶದಲ್ಲಿ ಮಾಡಿದ್ದೀರಿ ? ಮದರಾಸಿನಲ್ಲಿ 9 ಜನ ಮಂತ್ರಿಗಳು ಇರಬಹುದು, ಮೈಸೂರಿನಲ್ಲಿ 27-28 ಜನ ಆಂಜನೇಯನ ಬಾಲದಂತೆ ಏಕೆ ಬೆಳೆಯಬೇಕು ? ಲಕ್ಷಾಂತರ ರೂಪಾಯಿಗಳನ್ನು ಅನ್ಯಾಯವಾಗಿ ಖರ್ಚುಮಾಡಿ ಮಿತವ್ಯಯವನ್ನು ನೀವು ಪರಿಪಾಲನೆ ಮಾಡದೆ ದೇಶದ ಹಣ

(ಶ್ರೀ ಕೆ. ಲಕ್ಕಪ್ಪ)

ವನ್ನು ನೀವೇ ಹಂಚಿಕೊಂಡು ತಿನ್ನುವುದು ಸುಖೀ ರಾಜ್ಯದ ರಾಜ್ಯಾಂಗದ ನಿಯಮಗಳಿಗೆ ಅನುಗುಣ ವಾಗಿದೆಯೇ ? ಇದು ಪ್ರಜಾಪ್ರಭುತ್ವವೇ ? ಇದರ ಔಚಿತ್ಯವನ್ನು ಗೃಹಮಂತ್ರಿಗಳು ಹೇಳಬೇಕು. ಅಧಿಕಾರ ವರ್ಗ ಎರಡು ಲಕ್ಷ ಇರಬಹುದು, ಮೂರು ಲಕ್ಷ ಇರಬಹುದು, ಅದಕ್ಕಿಂತ ಹೆಚ್ಚು ನೌಕರರ ಸಂಖ್ಯೆ ಇರಬಹುದು. ಆದರೆ ಅವರ ಜೀವನದ ಅವಶ್ಯಕತೆಯನ್ನು ಅರಿಯತಕ್ಕದ್ದು ಸರ್ಕಾರದ ಕರ್ತವ್ಯ.

3-30 P. M.

